# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 11/2024**

**CW2**

**PW1**

ಸಾಕ್ಷಿಯ ಹೆಸರು : ರೇಣುಕಾ

ಗಂಡನ ಹೆಸರು : ಅಶೋಕ್

ಪ್ರಾಯ : 41 ವರ್ಷ

ಉದ್ಯೋಗ : ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ಕೆಲಸ

ವಾಸ : ಬಂಗ್ಲೆಗುಡ್ಡೆ , ಕಾರ್ಕಳ

ದಿನಾಂಕ **:25.10.2024** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ ಹಿರಿಯ ಸ.ಸ.ಅ. ರವರಿಂದ:

ನಾನು ಅಜೆಕಾರಿನ ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿತರು ಪರಿಚಯವಿಲ್ಲ. 2020 ನೇ ಇಸವಿಯಲ್ಲಿ 35 ಜನ ನಮ್ಮ ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ದಿನಾಂಕ 14.10.2020 ರಂದು ರಾತ್ರಿ 2 ಗಂಟೆಯ ಸಮಯದಲ್ಲಿ ಕಳ್ಳತನ ಆಗಿರುವ ಬಗ್ಗೆ ನನಗೆ

ಮಾಹಿತಿ ಇಲ್ಲ. ಯಾರು ಮತ್ತು ಹೇಗೆ ಕಳ್ಳತನ ಮಾಡಿದ್ದಾರೆ ಎನ್ನುವ ವಿಚಾರ ನನಗೆ ತಿಳಿದಿಲ್ಲ. ನಾನು ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆಯನ್ನು ನೀಡಿರುವುದಿಲ್ಲ.

ಪಾಟೀ ಸವಾಲುಃ ಹಿರಿಯ ಸ.ಸ.ಅ. ರವರಿಂದಃ

ದಿನಾಂಕ 13.10.2020 ರಂದು ನಾವು ಫ್ಯಾಕ್ಟರಿಯಲ್ಲಿ ಗೇರು ಬೀಜ ಸಂಸ್ಕರಿಸಿ ತೂಕ ಮಾಡಿ ಇಟ್ಟು ಹೋಗಿರುತ್ತೇವೆ ಎಂದರೆ ಸರಿ. ಮರದಿನ ಅಂದರೆ ದಿನಾಂಕಎ 14.10.2020 ರಂದು ಬೆಳಗ್ಗೆ 10.30 ರ ಸಮಯದಲ್ಲಿ ಲಾರಿ ಲೋಡು ಮಾಡುತ್ತಿರುವಾಗ ಹಿಂದಿನ ದಿನ ತೂಕ ಮಾಡಿ ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ಇಟ್ಟಿದ್ದಂತಹ ಗೇರು ಬೀಜದ ಪೈಕಿ 125 ಕೆಜಿ ಕಳವು ಆಗಿರುವ ಬಗ್ಗೆ ನನಗೆ ಚಾ ಸಾ 1 ರವರಿಂದ ತಿಳಿದು ಬಂದಿರುತ್ತದೆ ಎಂದರೆ ಸರಿ. ನಂತರ ನಮ್ಮ ಫ್ಯಾಕ್ಟರಿಯ ಪಶ್ಚಿಮದ ಬಾಗಿಲಿನ ಶೆಟರ್ ಮುಖಾಂತರ ಕಳ್ಳತನ ಮಾಡಿರಬಹುದು ಎಂದು ನಮ್ಮ ಮ್ಯಾನೇಜರ್ ರವರಿಗೆ ತಿಳಿದಿದ್ದು, ಇದರ ಬಗ್ಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವ ವಿಚಾರ ನನಗೆ ತಿಳಿದಿರುತ್ತದೆ. ನಾನು ದಿನಾಂಕ 28.10.2020 ರಂದು ಇದರ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿನಾಂಕ 17.11.2020 ರಂದು 1 ಮತ್ತು 2 ನೇ ಆರೋಪಿತರನ್ನು ನಮ್ಮ ಫ್ಯಾಕ್ಟರಿಗೆ ಕರೆದುತಂದಿದ್ದು, ಅವರುಗಳು ಕಳ್ಳತನ ಹೇಗೆ ಮಾಡಿದ್ದಾರೆ ಎಂದು ತಿಳಿಸಿದ್ದು,

ಇದರ ಬಗ್ಗೆ ನಾನು ಸದರಿ ದಿನಾಂಕದಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ದಿನಾಂಕ 05.01.2021 ರಂದು ಪೋಲೀಸರು ನನನ್ನು ಠಾಣೆಗೆ ಕರೆಸಿದ್ದು, ಅಲ್ಲಿ 3 ನೇ ಆರೋಪಿಯನ್ನು ನಾನು ನೋಡಿದ್ದು, ಸದರಿ 3 ನೇ ಆರೋಪಿಯು 1 ಮತ್ತು 2 ನೇ ಆರೋಪಿಯಿಂದ ಕಳ್ಳತನ ಮಾಡಿದ ಗೇರು ಬೀಜಗಳನ್ನು ಸ್ವೀಕರಿಸಿರುವ ವಿಚಾರ ನನಗೆ ತಿಳಿದಿರುತ್ತದೆ. ಇದರ ಬಗ್ಗೆ ನಾನು ಸದರಿ ದಿನಾಂಕದಂದು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸದರಿ 3 ಜನ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದಾರೆ ಎಂದರೆ ಸರಿ.

<u>ಪಾಟೀ ಸವಾಲುಃ</u> ಶ್ರೀ ಪಿ.ಎ.ಎಸ್. 1 ನೇ ಆರೋಪಿ ಪರ ವಕೀಲರಿಂದಃ

ನಮ್ಮ ಫ್ಯಾಕ್ಟರಿಯಲ್ಲಿ ಕಳ್ಳತನ ಆಗಿದೆ ಎಂದು ಹೇಳುವ ಸಮಯದಲ್ಲಿ ನಾವು ತೂಕ ಮಾಡಿ ಇಟ್ಟಿದ್ದೇವೆ ಎಂದು ಹೇಳಿದ ಗೇರು ಬೀಜಗಳು ಎಷ್ಟು ಇತ್ತು ಎಂದು ಮತ್ತು ಅದರಲ್ಲಿ ಎಷ್ಟು ಕಳ್ಳತನವಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಮ್ಯಾನೇಜರ್ ಹೇಳಿರುವ ಪ್ರಕಾರ ನಾನು ತಿಳಿದುಕೊಂಡಿದ್ದೇನೆ. ಮರುದಿನ ಲಾರಿಗೆ ಲೋಡು ಮಾಡುವ ಸಮಯದ ವರೆಗೂ ಇದರ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಆರೋಪಿತರು ಫ್ಯಾಕ್ಟರಿ ಒಳಗೆ ನುಗ್ಗಿದ್ದಾರೆ ಮತ್ತು ಅಲ್ಲಿ ಕಳ್ಳತನ ಮಾಡಿದ್ದಾರೆ ಎಂದು ಹೇಳುವಂತಹ ಯಾವುದೇ ಕುರುಹುಗಳು ಇರಲಿಲ್ಲ. ನಾನು ಬಂದು ನೋಡುವ ಸಮಯದಲ್ಲಿ ಖಾಲಿ

ಯಾಗಿದ್ದಂತಹ ಪ್ಲಾಸ್ಟಿಕ್ ಟ್ರೇ ಅಥವಾ ಇತರೆ ವಸ್ತುಗಳು ಕಂಡು ಬಂದಿರುವುದಿಲ್ಲ, ಫ್ಯಾಕ್ಟರಿಯಲ್ಲಿ ಯಾವುದೇ ಶೆಟರ್ ಗಳನ್ನು ಜಾಕ್ ಮುಖಾಂತರ ಎತ್ತಿರುವಂತಹ ಕುರುಹುಗಳು ಕಂಡು ಬಂದಿರುವುದಿಲ್ಲ. ಈಗ 3 ಜನ ಆರೋಪಿತರು ನ್ಯಾಯಾಲಯದ ಮುಂದಿದ್ದು, ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಅದರಲ್ಲಿ ಯಾರು 1, 2 ಮತ್ತು 3ನೇ ಆರೋಪಿ ಎಂದು ಸರಿಯಾಗಿ ಗುರುತಿಸಲು ಆಗುವುದಿಲ್ಲ. ನಮ್ಮ ಫ್ಯಾಕ್ಟರಿಯ ಮ್ಯಾನೇಜರ್ ರವರು ಹೇಳಿದಂತೆ ನಾನು ಪೋಲೀಸರು ಮುಂದೆ ಹೇಳಿದಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

<u>ಪಾಟೀ ಸವಾಲುಃ 2 ಮತ್ತು 3ನೇ</u> ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.
(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.